# ಬಹಾರ್ –ಇ–ಕಾಶ್ಮೀರ್

‘ಭೂಮಿಯಲ್ಲಿ ಸ್ವರ್ಗ ಎನ್ನುವುದು ಏನಾದರೂ ಇದ್ದರೆ, ಅದು ಇಲ್ಲಿಯೇ, ಅದು ಇಲ್ಲಿಯೇ’ ಈ ಶಬ್ದಗಳು ಕಾಶ್ಮೀರವನ್ನು, ಕಾಶ್ಮೀರದ ಸೌಂದರ್ಯವನ್ನು ವಿವರಿಸುತ್ತವೆ. ಕಾಶ್ಮೀರ್‌ದ ಮುಖ್ಯ ವೈಶಿಷ್ಟವೆಂದರೆ ಇದು ‘ನಾಲ್ಕು ಋತುಗಳ ನಾಡು’ ಅಂದರೆ ಇದು ವರ್ಷದ ನಾಲ್ಕು ಋತುಗಳಲ್ಲಿ ಅಂದರೆ ವಸಂತ, ಗ್ರೀಷ್ಮ ಮತ್ತು ಹೇಮಂತ, ಶಿಶಿರದಲ್ಲಿ ಅತ್ಯಂತ ಸುಂದರವಾಗಿ ಕಂಗೊಳಿಸುತ್ತದೆ. ಆದ್ದರಿಂದ ನಾವು ಕಾಶ್ಮೀರ್‌ಗೇ ವಾರ್ಷಿಕ ಪ್ರವಾಸಗಳನ್ನು ವರ್ಷದ ಬೇರೆ ಬೇರೆ ಕಾಲಗಳಲ್ಲಿ ಸಂಘಟಿಸುತ್ತೇವೆ.


ಕಾಶ್ಮೀರದ ಮುಖ್ಯ ಆಕರ್ಷಣೆ ಇಲ್ಲಿನ ‘ದೋಣಿ ಮನೆಗಳು’. ದಂತಕಥೆಗಳ ಪ್ರಕಾರ ಸಾವಿರಾರು ವರ್ಷಗಳ ಹಿಂದೆ ಕಾಶ್ಮೀರದಲ್ಲಿ ಒಂದು ದೊಡ್ಡದಾದ ಜಲಾಶಯವಿತ್ತು. ಈ ಜಲಾಶಯದಲ್ಲಿ ಅಡಗಿದ್ದ ದೈತ್ಯನನ್ನು ಸಾಯಿಸಲು ಹತ್ತಿರದ ಪರ್ವತಗಳನ್ನು ಋಷಿ ಕಶ್ಯಪರು ನಾಶಪಡಿಸಿದರು. ಆಗ ಈ ನೀರು ಹೊರಹರಿಯಿತು. ಆ ನೀರಿದ್ದ ಜಾಗದಲ್ಲಿ ಉದ್ಭವಿಸಿದ್ದೇ ಕಾಶ್ಮೀರ. ಇಂದಿಗೂ ಕೂಡ ಕಾಶ್ಮೀರದಲ್ಲಿನ ಸರೋವರಗಳನ್ನು ನೋಡುವಾಗ ಈ ದಂತಕಥೆಗಳಲ್ಲಿ ಸತ್ಯಾಂಶವಿದೆ ಎನ್ನುವಂತೆ ಕಂಡುಬರುತ್ತದೆ. ಆರಾಮದಾಯಕ ದೋಣಿ ಮನೆಗಳು ರಾಜಮಹಲುಗಳ ಚಿಕ್ಕ ತೇಲುವ ಪಡಿಯಚ್ಚುಗಳೆನ್ನಬಹುದು. ಶ್ರೀನಗರದ ನಮ್ಮ ಪ್ರವಾಸದಲ್ಲಿ ನಾವು ‘ನಾಗಿನ್ ಸರೋವರದ’ ದೋಣಿಮನೆಗಳಲ್ಲಿ ತಂಗುವ ಸೌಲಭ್ಯವನ್ನು ಒದಗಿಸುತ್ತೇವೆ. ಹತ್ತಿರದ ನೀರಿನಲ್ಲಿ ಕಾಣುವ ಹರಿ ಪರ್ವತದ ಪ್ರತಿಬಿಂಬವು ಕೀರೀಟದ ಮೇಲಿನ ವಜ್ರದಂತೆ ಕಂಗೊಳಿಸುತ್ತದೆ. ಈ ಸರೋವರದ ಶಾಂತ ಮತ್ತು ಆರಾಮದಾಯಕವಾದ ಅಲಂಕರಿಸಿದ ದೋಣಿ ಮನೆಯಲ್ಲಿ ತಂಗುವ ಅನುಭವಕ್ಕೆ ಬೇರೆ ಏನನ್ನೂ ಹೋಲಿಕೆ ಮಾಡಲು ಸಾಧ್ಯವಿಲ್ಲ. ಇದರಿಂದ ಒಟ್ಟಾರೆ ಪ್ರವಾಸವು ಕನಸಿನಲ್ಲಿ ಇದ್ದಂತೆ ಗೋಚರಿಸುತ್ತದೆ.

ನಾಗಿನ್ ಸರೋವರದ ಪ್ರಶಾಂತವಾದ ವಾತಾವರಣ, ದಾಲ್ ಸರೋವರದ ಶಿಕಾರಾದಲ್ಲಿನ ಬೋಟಿಂಗ್ ಅವಿಸ್ಮರಣೀಯವಾಗಿ ಉಳಿಯುವಂಥದ್ದು. ಬೋಟಿಂಗ್ ಆನಂದಿಸುವಾಗ ನೀವು ಶಾಪಿಂಗ್‌ಗೆ ಕೂಡ ಹೋಗಬಹುದು. ದಾಲ್ ಸರೋವರದಲ್ಲಿ ಚಾರ್‌ಮಿನಾರ್ ಅತ್ಯಂತ ಮಹತ್ವದ ಸ್ಥಳವಾಗಿದೆ. ಇದೇ ಸುಂದರ ಹಾಗೂ ಶಾಂತ ಸ್ಥಳವನ್ನು ಮುನಿಸಿಕೊಂಡ ತನ್ನ ಮಡದಿಯನ್ನು ಒಲಿಸಿಕೊಳ್ಳಲು ಜಹಾಂಗೀರ್ ಬಳಸುತ್ತಿದ್ದ ಎನ್ನಲಾಗುತ್ತದೆ. ಈ ಚಿಕ್ಕ ಭೇಟಿಗಳಿಗೆ ಚಾರ್‌ಮಿನಾರ್‌ನ ಮರಗಳು ಸಾಕ್ಷಿಯೋ ಎನ್ನುವಂತೆ ಕಂಡುಬರುತ್ತವೆ.

ಶ್ರೀನಗರದಲ್ಲಿ ತಿರುಗುವಾಗ ನೀವು ಯಾವಾಗಲೂ ಸಂದರ್ಶಿಸಬೇಕಾದ ದೇವಾಲಯವೊಂದಿದೆ. ಇದೇ ಆದಿಶಂಕರಾಚಾರ್ಯರಿಂದ ಸ್ಥಾಪಿತವಾದ ಶಿವ ಮಂದಿರ, ಈ ಬೆಟ್ಟದ ಮೇಲೆ ಆದಿ ಶಂಕರಾಚಾರ್ಯರು ತಪಸ್ಸು ಮಾಡಿದ್ದರು ಎನ್ನುತ್ತಾರೆ. ಕಾಶ್ಮೀರ ಪ್ರವಾಸದ ವೇಳೆಯಲ್ಲಿ ನಾವು ವಾಟರ್ ಸ್ಪೋರ್ಟ್ಸ್‌ಗಳನ್ನು ಆನಂದಿಸಬಹುದು ಮತ್ತು ಗೊಂಡೋಲಾ ರೈಡ್‌ನಿಂದಾಗಿ ಗುಲ್ಮಾರ್ಗ್ ಸಿನಿಮೀಯ ದೃಶ್ಯಾವಳಿಯನ್ನು ಯಾವಾಗಲೂ ನೆನಪಿಸಿಕೊಳ್ಳಬಹುದು. ಗುಲ್ಮಾರ್ಗ್ ಸಮುದ್ರ ಮಟ್ಟದಿಂದ ಎಂಟು ಸಾವಿರ ಅಡಿಗಳಷ್ಟು ಎತ್ತರದಲ್ಲಿದ್ದು ಗೊಂಡೋಲಾ ಮೂಲಕ ನೀವು ಮತ್ತಷ್ಟು ಮುಂದಕ್ಕೆ ಪ್ರವಾಸ ಮಾಡಬಹುದು ಹಾಗೂ ಬಿಳಿಯ ಹಿಮರಾಶಿಯ ಪ್ರದೇಶವನ್ನು ಪ್ರವೇಶಿಸಬಹುದು. ಗೊಂಡೋಲಾದಲ್ಲಿ ಸಾಗುವ ಥ್ರಿಲ್ ನೀಡುವ ಪ್ರಯಾಣ ಮುಗಿದ ನಂತರ ಹಿಮದ ತುತ್ತತುದಿಯಲ್ಲಿ ಸಾಗುವ ಗುಲ್ಮಾರ್ಗ್‌ನ ಪ್ರಯಾಣ ನೆನಪಿನಿಂದ ಮರೆಯಾಗದು. ಶ್ರೀನಗರದ ಸೈಟ್‌ಸೀಯಿಂಗ್‌ಗಳಲ್ಲಿ ರಾಜಶಾಹಿ ಪಾಯಿಂಟ್ ಅಂದರೆ ಫೇಮಸ್ ಮೊಘಲ್ ಗಾರ್ಡನ್ಸ್, ನಿಶಾತ್ ಭಾಗ್ ಮತ್ತು ಶಾಲಿಮಾರ್ ಗಾರ್ಡನ್ಸ್ ಒಂದಾಗಿದೆ.

ಲೆಡ್ಡರ್ ನದಿಯ ದಡದಲ್ಲಿರುವ ಪಹಲ್‌ಗಾಂಗೆ ಶ್ರೀನಗರದಿಂದ ಹೋಗುವ ಮಾರ್ಗ ಅತ್ಯಂತ ಮನಮೋಹಕವಾಗಿದೆ ಮತ್ತು ಕಣ್ಮನಗಳನ್ನು ತಣಿಸುತ್ತದೆ. ಇಲ್ಲಿ ಪುರಾತನ ಶಿವ ದೇವಾಲಯದ ಕುರುಹುಗಳನ್ನು ವೀಕ್ಷಿಸಬಹುದು. ಈ ರಸ್ತೆಯಲ್ಲಿಯೇ ಪಾಂಪೋರ್ ಎನ್ನುವ ಹಳ್ಳಿಯಿದ್ದು ಈ ಹಳ್ಳಿ ಕೇಸರಿಯ ಬೆಳೆಗೆ ಪ್ರಸಿದ್ಧವಾಗಿದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಇಲ್ಲಿಯ ಹೊಲಗಳು ಕೇಸರಿಯ ಹೂವುಗಳಿಂದ ತುಂಬಿರುತ್ತವೆ. ಪಹಲ್‌ಗಾಂ ಹಳ್ಳಿಯು ನಾಲ್ಕು ಬದಿಯಿಂದಲೂ ಹಿಮಚ್ಛಾದಿತ ಪರ್ವತಗಳ ನಡುವಿನಲ್ಲಿದೆ. ಅಮರ್‌ನಾಥ್ ಎನ್ನುವ ಯಾತ್ರಾಸ್ಥಳಕ್ಕೆ ಪಹಲ್‌ಗಾಂ ಮೂಲಕವೇ ಹೋಗಬೇಕಾಗುತ್ತದೆ. ನೈಸರ್ಗಿಕ ಸೌಂದರ್ಯವನ್ನು ಸವಿಯುವುದಕ್ಕಾಗಿ ನಾವು ಇಲ್ಲಿಯೂ ಎರಡು ದಿನಗಳ ಕಾಲ ಉಳಿದುಕೊಳ್ಳುತ್ತೇವೆ.

ಕಾಶ್ಮೀರ್‌ನ ನೈಸರ್ಗಿಕ ಸೌಂದರ್ಯದ ಆನಂದವನ್ನು ಸವಿದ ನಂತರ, ಪ್ರವಾಸಿಗಳು ಮಾತಾ ವೈಷ್ಣೋದೇವಿ ಮಂದಿರಕ್ಕೆ ಪ್ರಯಾಣ ಬೆಳೆಸುತ್ತಾರೆ. ಈ ಪುಣ್ಯಕ್ಷೇತ್ರವು ಕಟ್ರಾ ಜಿಲ್ಲೆಯ ತ್ರಿಕೂಟ ಪರ್ವತದ ಮೇಲ್ಭಾಗದಲ್ಲಿ ಇದೆ. ಈ ದೇವಿ ಮಂದಿರಕ್ಕೆ ಭೇಟಿ ನೀಡುವುದು ದಿವ್ಯವಾದ ಅನುಭೂತಿಯನ್ನು ನೀಡುತ್ತದೆ. ನಮ್ಮ ಪ್ರವಾಸವು ದೋಣಿಮನೆಗಳ ರೈಡ್, ಶಿಖಾರಾ ರೈಡ್ ಮತ್ತು ಇತರೆ ಸ್ಥಳೀಯ ಆಕರ್ಷಣೆಗಳನ್ನು ಒಳಗೊಂಡಿದ್ದು, ಪ್ರವಾಸಿಯು ಕಾವಾ ಟೀಯ ರುಚಿಯನ್ನು ಸವಿಯಬಹುದು. ಇದು ಕೇಸರಿಯಿಂದ ಮಾಡಿದ ಚಹಾ ಆಗಿದ್ದು, ಇಲ್ಲಿನ ಸ್ಥಳೀಯರಿಗೆ ವರವೆನ್ನಬಹುದು. ಆದ್ದರಿಂದಲೇ ನಾವು ಕಾಶ್ಮೀರಿ ಕಾವಾವನ್ನು ರೋಮ್ಯಾಂಟಿಕ್ ತಾಣವಾಗಿರುವ ಚಾರ್‌ಮಿನಾರ್‌ನಲ್ಲಿ ಒದಗಿಸುತ್ತೇವೆ. ಈ ಎಲ್ಲ ಸಂತೋಷಗಳು ಮತ್ತು ಇನ್ನೂ ಹೆಚ್ಚಿನವುಗಳ ನಿಮಗೆ ಭವ್ಯವಾದ ಅನುಭವವನ್ನು ನೀಡುತ್ತವೆ. ಹೆಚ್ಚಿನ ಮಾಹಿತಿಗೆ www.kesari.in-ಗೆ ಲಾಗ್ ಇನ್ ಮಾಡಿ ಅಥವಾ 1800–22–1100ಕ್ಕೆ ಕರೆ ಮಾಡಿ.

Bengaluru 4128 2222 • www.kesari.in • SMS KESARI <space> your message to 56677 • Toll free 1800 22 1100